26

ಮಾತಾಪಿತರ
ಹಕ್ಕು-ಬಾಧ್ಯತೆಗಳು



مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ಮಾನವರಲ್ಲಿ ನಮ್ಮ ಸೌಜನ್ಯ ವರ್ತನೆ-ಗೆ, ಸೇವೆಗೆ ಮತ್ತು ನಮ್ಮ ಸಂಪತ್ತಿನ ಖರ್ಚಿಗೆ ಅತಿ ಹೆಚ್ಚು ಹಾಗೂ ಪ್ರಥಮ ಹಕ್ಕುದಾರರು ತಂದೆ-ತಾಯಿಗಳಾಗಿದ್ದಾರೆ.

ಇಸ್ಲಾಂ ಧರ್ಮವು ಕುಟುಂಬ ಭದ್ರತೆಗೆ ಬಹಳ ಪ್ರಾ-ಮುಖ್ಯತೆ ನೀಡಿರುವುದನ್ನು ನಾವು ಕಾಣಬಹುದಾ-ಗಿದೆ. ಸಮಾಜದ ಭದ್ರತೆಗೆ ಕುಟುಂಬ ಭದ್ರತೆಯೇ ಕಾರಣ. ಕುಟುಂಬ ಸದಸ್ಯರ ಪರಸ್ಪರ ಪ್ರೀತಿ, ಸಹಕಾರ ಮತ್ತು ಸೇವೆ ಕುಟುಂಬವನ್ನು ಭದ್ರಗೊಳಿಸುತ್ತದೆ. ಪರಸ್ಪರ ಅರಿತು, ಗೌರವಿಸಬೇಕಾದವರನ್ನು ಗೌರವಿಸಿ ಅನುಸರಿಸುವುದು ಕುಟುಂಬದ ಭದ್ರತೆಗೆ ಅನಿವಾ-ರ್ಯವಾಗಿದೆ. ಕುಟುಂಬದ ಬುನಾದಿ ತಂದೆ–ತಾಯಿ ಗಳಾಗಿದ್ದಾರೆ. ಅವರೇ ವ್ಯಕ್ತಿಗೆ ಜನ್ಮ ನೀಡಿ ಸಾಕಿ ಸಲಹಿ ಬೆಳೆಸುತ್ತಾರೆ. ಆದ್ದರಿಂದ ಸೃಷ್ಟಿಕರ್ತನಾದ ಅಲ್ಲಾಹನ ಬಳಿಕ ಮಾನವನು ತನ್ನ ತಂದೆ-ತಾಯಿಗಳಿಗೆ ಋಣಿ-

ಯಾಗಿರಬೇಕಾಗಿದೆ. ಅವರ ಪೈಕಿ ತಾಯಿಗೆ ಪ್ರಥಮ ಸ್ಥಾನವಿದೆ.

ಪವಿತ್ರ ಕುರ್‌ಆನ್ ಅನೇಕ ಕಡೆಗಳಲ್ಲಿ ಮಾತಾಪಿತರ ಹಕ್ಕನ್ನು ಅಲ್ಲಾಹನ ಹಕ್ಕುಗಳ ಜೊತೆಗೆ ವಿವರಿಸಿದೆ. ಅಲ್ಲಾಹನಿಗೆ ಕೃತಜ್ಞರಾಗಬೇಕೆಂದು ಇರುವ ಕಡೆಗಳಲ್ಲಿ ಜೊತೆಗೆ ತಂದೆ–ತಾಯಿಗಳಿಗೆ ಕೃತಜ್ಞರಾಗಬೇಕೆಂದು ಆದೇಶಿಸಲಾಗಿದೆ.

"ನಿಮ್ಮ ಪ್ರಭು ಹೀಗೆ ವಿಧಿಸಿ ಬಿಟ್ಟಿದ್ದಾನೆ. ನೀವು ಕೇವಲ ಅವನೊಬ್ಬನನ್ನೇ ಹೊರತು ಇನ್ನಾರನ್ನೂ ಆರಾಧಿಸಬಾರದು. ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸಬೇಕು." (17:23)

"ನೀವೆಲ್ಲರೂ ಅಲ್ಲಾಹನ ಆರಾಧನೆ ಮಾಡಿರಿ. ಅವನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡಬೇಡಿ. ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸಿರಿ." (4:36)

“ಓ ಪ್ರವಾದಿಯವರೇ, ನೀವು ಅವರೊಡನೆ ಹೇಳಿರಿ. ಬನ್ನಿರಿ, ನಿಮ್ಮ ರಬ್ಬ್ ನಿಮ್ಮ ಮೇಲೆ ಯಾವುದನ್ನು ಕಡ್ಡಾಯಗೊಳಿಸಿದ್ದಾನೆ ಎಂದು ನಾನು ತಿಳಿಸುವೆನು. ಅವನೊಂದಿಗೆ ಯಾವುದನ್ನೂ ಸಹಭಾಗಿಯನ್ನಾಗಿ ಮಾಡಬೇಡಿ. ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸಿರಿ.” (6:151)

ಸೂರ ಲುಕ್ಮಾನ್‌ನ 31 ನೇ ಅಧ್ಯಾಯದ 14ನೇ ಸೂಕ್ತದಲ್ಲಿ ಮಾತಾಪಿತರಿಗೆ ಕೃತಜ್ಞರಾಗಿರುವಂತೆ ಬಣ್ಣಿಸಿರುವುದನ್ನು ನಾವು ಕಾಣಬಹುದು.

“ನನಗೆ ಕೃತಜ್ಞತೆ ಸಲ್ಲಿಸಿರಿ ಮತ್ತು ನಿಮ್ಮ ತಂದೆ ತಾಯಿಗಳಿಗೆ ಕೃತಜ್ಞತೆ ಸಲ್ಲಿಸಿರಿ (ಎಂದು ನಾವು ಉಪದೇಶಿಸಿದೆವು).”

ಈ ಎಲ್ಲಾ ಆಯತ್‌ಗಳಿಂದ ನಾವು ತಂದೆ–ತಾಯಿಗಳ ಹಕ್ಕಿನ ಪ್ರಾಮುಖ್ಯತೆ ಮತ್ತು ಮಹತ್ವವನ್ನು ಮನಗಾಣ-

ಬಹುದಾಗಿದೆ.

ಇನ್ನು ನಾವು ಪ್ರವಾದಿ(ಸ) ಯವರ ಹದೀಸ್‌ನಲ್ಲಿ ಕೂಡ ಅಲ್ಲಾಹನ ನಂತರ ತಂದೆ–ತಾಯಿಗಳೇ ನಮ್ಮ ಹಕ್ಕು-ದಾರರೆಂದು ವಿವರಿಸಿರುವುದನ್ನು ಕಾಣಬಹುದಾಗಿದೆ.

ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ. ನಾನು ಪ್ರವಾದಿ(ಸ) ಯವರಲ್ಲಿ ವಿಚಾರಿಸಿದೆ. "ಯಾವ ಕಾರ್ಯ ಅಲ್ಲಾಹನಿಗೆ ಅತ್ಯಧಿಕ ಪ್ರಿಯವಾಗಿದೆ?" ಅವರು ಹೇಳಿದರು. "ಸಮಯಕ್ಕೆ ಸರಿಯಾಗಿ ನಿರ್ವಹಿಸುವ ನಮಾಝ್." ಆ ಬಳಿಕ ಯಾವ ಕಾರ್ಯ ಅಲ್ಲಾ-ಹನಿಗೆ ಅತ್ಯಧಿಕ ಪ್ರಿಯವಾಗಿದೆ ಎಂದು ಕೇಳಿದಾಗ, "ತಂದೆ-ತಾಯಿಗಳೊಂದಿಗೆ ಸೌಜನ್ಯದ ವರ್ತನೆ" ಎಂದು ಅವರು ಉತ್ತರಿಸಿದರು. ಆ ಬಳಿಕ ಯಾವುದೆಂದು ನಾನು ವಿಚಾರಿಸಿದಾಗ "ಅಲ್ಲಾಹನ ಮಾರ್ಗದಲ್ಲಿ ಹೋರಾಟ ನಡೆಸುವುದು" ಎಂದು ಅವರು ಉತ್ತರಿಸಿದರು. (ಬುಖಾರಿ ಮುಸ್ಲಿಂ)

ನಮ್ಮ ಸೇವೆ ಮತ್ತು ಸದ್ವರ್ತನೆಗೆ ಹೆಚ್ಚು ಅರ್ಹಳು ತಾ-ಯಿಯಾಗಿದ್ದಾಳೆ. ತಾಯಿ ನಮಗಾಗಿ ಅಪಾರ ಕಷ್ಟ-ನಷ್ಟಗಳನ್ನು ಸಹಿಸುತ್ತಾಳೆ. ಆಕೆಯ ಉಪಕಾರ ಮತ್ತು ತ್ಯಾಗಗಳು ತಂದೆಗಿಂತ ಎಷ್ಟೋ ಪಾಲು ಅಧಿಕವಾಗಿದೆ. ಮಾತ್ರವಲ್ಲ, ಇಸ್ಲಾಂ ಧರ್ಮವು ತಾಯಿಯ ಹಕ್ಕು ಬಾಧ್ಯ-ತೆಗಳು ಹೆಚ್ಚೆಂದು ಹೇಳಿದೆ. ತಾಯಿಯೊಂದಿಗೆ ಸದ್ವರ್ತನೆ ಮಾಡುವಂತೆ ಹೆಚ್ಚು ಪ್ರೇರೇಪಿಸಿದೆ.

"ತನ್ನ ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸ-ಬೇಕೆಂದು ನಾವು ಮಾನವನಿಗೆ ಆದೇಶಿಸಿದೆವು. ಅವನ ತಾಯಿ ಬಹಳ ಕಷ್ಟಪಟ್ಟು ಅವನನ್ನು ಗರ್ಭದಲ್ಲಿರಿಸಿದ-ಳು ಮತ್ತು ಬಹಳ ಕಷ್ಟಪಟ್ಟು ಅವನನ್ನು ಹೆತ್ತಳು. ಅವನ ಗರ್ಭಾವಧಿಯಲ್ಲಿ ಮತ್ತು ಮೊಲೆಹಾಲು ಬಿಡಿಸುವುದರಲ್ಲಿ 30 ತಿಂಗಳು ತಗುಲಿದವು." (46:15)

ಸೂರ ಲುಕ್ಮಾನಿನ 31 ನೇ ಅಧ್ಯಾಯದ 14ನೇ ಆಯ-ತ್ತಿನಲ್ಲಿ ಅಲ್ಲಾಹು ತಾಯಿಯ ಕುರಿತು ಈ ರೀತಿ ವಿವ-

ರಿಸಿದ್ದಾನೆ. "ಮಾನವನಿಗೆ ತನ್ನ ಮಾತಾಪಿತರ ಹಕ್ಕನ್ನು ತಿಳಿದುಕೊಳ್ಳಲು ನಾವು ತಾಕಿತು ಮಾಡಿದ್ದೇವೆ. ಅವನ ತಾಯಿ ನಿತ್ರಾಣದ ಮೇಲೆ ನಿತ್ರಾಣವನ್ನು ಸಹಿಸಿ ಅವನನ್ನು ತನ್ನ ಗರ್ಭದಲ್ಲಿರಿಸಿದಳು ಮತ್ತು ಅವನ ಸ್ತನಪಾನ ಬಿಡಿಸುವುದರಲ್ಲಿ ಎರಡು ವರ್ಷ ತಗುಲಿದವು."

ಮಾತಾಪಿತರೊಂದಿಗೆ ಉತ್ತಮ ವ್ಯವಹಾರವನ್ನು ಆದೇಶಿಸುತ್ತಾ ಪವಿತ್ರ ಕುರ್‌ಆನ್ ಮಾತೆಯ ನಿರಂತರ ಸಂಕಷ್ಟಗಳನ್ನು ಸಹಿಸುವುದನ್ನು ಬಹಳ ಪ್ರಭಾವಪೂರ್ಣ ಶೈಲಿಯಲ್ಲಿ ಚಿತ್ರಿಸಿದೆ. ಅತ್ಯುತ್ತಮವಾದ ಭಾವನಾತ್ಮಕ ಶೈಲಿಯಲ್ಲಿ ತ್ಯಾಗದ ಪ್ರತಿರೂಪವಾದ ತಾಯಿಯು ತಂದೆಗಿಂತ ನಮ್ಮ ಸದ್ವರ್ತನೆಗೆ ಮತ್ತು ಸೇವೆಗೆ ಹೆಚ್ಚು ಅರ್ಹಳು ಎಂಬುದನ್ನು ಮಾರ್ಮಿಕವಾಗಿ ವಿವರಿಸಿದೆ. ಈ ವಾಸ್ತವಿಕತೆಯನ್ನು ಪ್ರಸ್ತುತ ಪ್ರವಾದಿಯವರ(ಸ) ಹದೀಸ್‌ನಲ್ಲೂ ಸ್ಪಷ್ಟವಾಗಿ ಕಾಣಬಹುದಾಗಿದೆ.

ಅಬೂ ಹುರೈರ(ರ) ಹೇಳುತ್ತಾರೆ. ಒಬ್ಬ ವ್ಯಕ್ತಿ ಪ್ರವಾದಿ-

(ಸ) ಯವರ ಬಳಿ ಬಂದು ಈ ರೀತಿ ವಿಚಾರಿಸಿದರು. "ಓ ಪ್ರವಾದಿಯವರೇ, ನನ್ನ ಸದ್ವರ್ತನೆಗೆ ಅತ್ಯಧಿಕ ಅರ್ಹರು ಯಾರು?" ಪ್ರವಾದಿ(ಸ) ಯವರು ಹೇಳಿದರು: " ನಿಮ್ಮ ತಾಯಿ." ಆ ವ್ಯಕ್ತಿ ಕೇಳಿದರು. "ನಂತರ ಯಾರು?" ಪ್ರವಾದಿ(ಸ) ಯವರು ಉತ್ತರಿಸಿದರು. "ನಿಮ್ಮ ತಾಯಿ." ಆ ವ್ಯಕ್ತಿ ಪುನಃ ಕೇಳಿದರು. "ಅನಂತರ ಯಾರು?" ಪ್ರವಾದಿ(ಸ) ಯವರು ಉತ್ತರಿಸಿದರು. "ನಿಮ್ಮ ತಾಯಿ." ಆ ವ್ಯಕ್ತಿ ನಾಲ್ಕನೇ ಸಲ ಕೇಳಿದರು. "ಅನಂತರ ಯಾರು?" ಪ್ರವಾದಿ(ಸ) ಯವರು ಉತ್ತರಿಸಿದರು. "ನಿಮ್ಮ ತಂದೆ." (ಬುಖಾರಿ)

ಮಾತಾಪಿತರು ನಮ್ಮ ಸ್ವತ್ತಿನ ಮಾಲೀಕರಿಂದ ಪರಿಗಣಿಸಿ ಅವರಿಗಾಗಿ ಮನಬಿಚ್ಚಿ ಖರ್ಚು ಮಾಡಬೇಕೆಂದು ಕುರ್ಆನ್ ನಮಗೆ ಆದೇಶಿಸುತ್ತದೆ.

"ನಾವೇನು ಖರ್ಚು ಮಾಡಬೇಕೆಂದು ಜನರು ನಿಮ್ಮೊಂದಿಗೆ ಕೇಳುತ್ತಾರೆ. ಹೇಳಿರಿ, ನೀವು ಏನನ್ನು ಖರ್ಚು ಮಾ-

ಡುವುದಿದ್ದರೂ ಅದರ ಪ್ರಥಮ ಹಕ್ಕುದಾರರು ನಿಮ್ಮ ತಂದೆ-ತಾಯಿಗಳಾಗಿದ್ದಾರೆ." (2:215)

ಒಮ್ಮೆ ಪ್ರವಾದಿ(ಸ) ಯವರ ಬಳಿಗೆ ಒಬ್ಬ ವ್ಯಕ್ತಿ ಬಂದು ತನ್ನ ತಂದೆಯ ಬಗ್ಗೆ, ಅವರು ಬೇಕಾದಾಗಲೆಲ್ಲಾ ನನ್ನ ಹಣವನ್ನು ತೆಗೆದುಕೊಳ್ಳುತ್ತಾರೆ ಎಂದು ದೂರಿದರು. ಪ್ರವಾದಿ(ಸ) ಯವರು ಆ ವ್ಯಕ್ತಿಯ ತಂದೆಯನ್ನು ಕರೆಸಿದರು. ಊರುಗೋಲಿನ ಆಸರೆ ಪಡೆದು ಒಬ್ಬ ಮುದಿ ಪ್ರಾಯದ ವ್ಯಕ್ತಿ ಬಂದರು. ಪ್ರವಾದಿ(ಸ) ಯವರು ವಿಚಾರಿಸಿದಾಗ ಅವರು ಹೀಗೆಂದರು. "ಒಂದು ಕಾಲದಲ್ಲಿ ನಾನು ಬಲಾಢ್ಯನಾಗಿದ್ದೆ. ಇವನು ಬಲಹೀನ ಮತ್ತು ಅಶಕ್ತನಾಗಿದ್ದ. ನಾನು ಧನಿಕನಾಗಿದ್ದೆ. ಇವನು ದರಿದ್ರನಾಗಿದ್ದ. ನಾನೆಂದು ಇವನನ್ನು ನನ್ನ ಹಣ ತೆಗೆಯದಂತೆ ತಡೆಯಲಿಲ್ಲ. ಇಂದು ನಾನು ಬಲಹೀನನಾಗಿದ್ದೇನೆ. ಇವನು ಬಲಾಢ್ಯ ಮತ್ತು ಆರೋಗ್ಯವಂತನಾಗಿದ್ದಾನೆ. ನಾನು ದರಿದ್ರನಾಗಿದ್ದೇನೆ. ಇವನು ಧನಿಕನಾಗಿದ್ದಾನೆ.

ಈಗ ಮಾತ್ರ ಇವನು ತನ್ನ ಹಣವನ್ನು ನನ್ನಿಂದ ದೂರವಿಡುತ್ತಾನೆ."

ವೃದ್ಧ ತಂದೆಯ ಮಾತು ಕೇಳಿ ಪ್ರವಾದಿ(ಸ) ಯವರು ಅತ್ತುಬಿಟ್ಟರು. ಆ ವ್ಯಕ್ತಿಯನ್ನು ಉದ್ದೇಶಿಸಿ "ನೀನು ಮತ್ತು ನಿನ್ನ ಸಂಪತ್ತು ನಿನ್ನ ತಂದೆಗೆ ಸೇರಿದ ಸ್ವತ್ತು" ಎಂದು ಹೇಳಿದರು.

ವೃದ್ಧಾಪ್ಯವು ಜೀವನದ ಕಷ್ಟ ಕಾಲವಾಗಿದೆ. ನಾವು ಮಾತಾಪಿತರ ಪಾಲನೆ–ಪೋಷಣೆ ಮತ್ತು ಅವರ ಮೇಲ್ನೋಟದಲ್ಲಿ ಬೆಳೆದು ಯವ್ವನಕ್ಕೆ ತಲುಪಿದಾಗ, ಕೌಟುಂಬಿಕ ಮತ್ತು ಸಾಮಾಜಿಕ ಹೊಣೆಗಾರಿಕೆಗಳನ್ನು ಸ್ವೀಕರಿಸಲು ಯೋಗ್ಯರಾದಾಗ, ಜೀವನದ ವಿವಿಧ ಸ್ಥರಗಳಲ್ಲಿನ ಬೇಡಿಕೆಗಳನ್ನು ಪೂರೈಸಲು ಸಿದ್ಧರಾಗುವ ಹೊತ್ತಿಗೆ ಮಾತಾಪಿತರು ತಮ್ಮ ಜೀವನದ ಮುಸ್ಸಂಜೆಗೆ ಕಾಲಿಟ್ಟಿರುತ್ತಾರೆ. ಆಗ ಅವರ ಇಚ್ಛಾಶಕ್ತಿ ಕುಂದಿರುತ್ತದೆ. ಶಕ್ತಿ ಸಾಮರ್ಥ್ಯಗಳು ಕ್ಷೀಣಿಸಿರುತ್ತವೆ. ಏನಾದರೂ ಸಾಧಿಸಬೇಕೆಂಬ

ಛಲ ಇರುವುದಿಲ್ಲ. ಸ್ವತಂತ್ರವಾಗಿ ಸಂಚರಿಸುತ್ತಿದ್ದ ಮತ್ತು ವರ್ತಿಸುತ್ತಿದ್ದ ಯವ್ವನದ ಬಳಿಕ ವೃದ್ಧಾಪ್ಯದಿಂದಾಗಿ ಅಸಹಾಯಕತೆ ಅನುಭವಿಸುತ್ತಿರುವ ವೃದ್ಧ ಮಾತಾಪಿ-ತರು ದೈಹಿಕ ಆಯಾಸದೊಂದಿಗೆ ಮಾನಸಿಕ ಕ್ಲೇಶವನ್ನು ಅನುಭವಿಸಬೇಕಾಗುತ್ತದೆ. ಅದು ಅವರನ್ನು ಅತ್ಯಂತ ಕಳವಳಕ್ಕೆ ಗುರಿಪಡಿಸುತ್ತದೆ. ವಾಸ್ತವದಲ್ಲಿ ವೃದ್ಧಾಪ್ಯ ಬಾ-ಧಿಸಿದರೆ ಸಹನೆ ಕಡಿಮೆಯಾಗುತ್ತದೆ. ಬಲಹೀನತೆಯಿಂ-ದಾಗಿ ತಮ್ಮ ಅಸ್ತಿತ್ವದ, ಮಹತ್ವದ ಪ್ರಜ್ಞೆ ಅವರನ್ನು ಕಾ-ಡುತ್ತದೆ. ಆಗ ಅವರು ಸಣ್ಣಪುಟ್ಟ ವಿಷಯಕ್ಕೂ ಪರಿತಪಿಸ ತೊಡಗುತ್ತಾರೆ. ಪ್ರಾಯಾಧಿಕ್ಯದ ಕಾರಣ ಸ್ವಲ್ಪ ಸಿಡುಕು ಸ್ವಭಾವ ಬಂದಾಗ ನಿಮ್ಮ ಇಚ್ಛೆ ಮತ್ತು ಅಭಿರುಚಿಗೆ ವಿರುದ್ಧವಾದ ಮಾತುಗಳನ್ನು ಆಡಬಹುದು. ಅಲ್ಲದೆ ನಾವು ನಿರೀಕ್ಷಿಸದ ಕೆಲವು ಬೇಡಿಕೆಗಳನ್ನು ಮುಂದಿಡ-ಬಹುದು. ಈ ಎಲ್ಲಾ ಸಂಕೀರ್ಣತೆಯನ್ನು ಮನಗಂಡು ನಮ್ಮ ಯಾವುದೇ ಮಾತು ಮತ್ತು ಕೃತಿಯಿಂದ ಅವರಿಗೆ

ಬೇಸರ ವಾಗುವಂತೆ, ನೋವಾಗುವಂತೆ ಉತ್ತರಿಸಬಾರ-ದು. ಅವರು ಕುಪಿತರಾಗದಂತೆ ಜಾಗರೂಕತೆ ವಹಿಸಬೇ-ಕು. ಅಲ್ಲಾಹು ಹೇಳುತ್ತಾನೆ.

“ಅವರ ಪೈಕಿ ಒಬ್ಬರು ಅಥವಾ ಇಬ್ಬರು ನಿಮ್ಮ ಮುಂದೆ ವೃದ್ಧಾಪ್ಯಕ್ಕೆ ತಲುಪಿದರೆ ಅವರಿಗೆ ನೀವು ‘ಅಯ್ಯೋ’ ಎಂದು ಹೇಳಬೇಡಿ. ಅವರಿಗೆ ಛೀಮಾರಿ ಹಾಕಬೇಡಿ. ಅವರೊಂದಿಗೆ ಗೌರವಪೂರ್ಣವಾಗಿ ಮಾತನಾಡಿರಿ.” (17:23)

ಅಲ್ಲಾಹನಿಗೆ ಸಹಭಾಗಿಗಳನ್ನು ಆರೋಪಿಸುವುದು ತೌಹೀದಿಗೆ ವಿರುದ್ಧ ಮತ್ತು ಘೋರ ಪಾಪವಾಗಿದೆ. ಈ ಘೋರ ಪಾಪವನ್ನು ಮಾಡುವಂತೆ ತಂದೆತಾಯಿಗಳು ಉಪದೇಶಿಸಿದರೆ ಅಥವಾ ಅದಕ್ಕಾಗಿ ಬಲವಂತ ಪಡಿ-ಸಿದರೆ ಅವರನ್ನು ಅನುಸರಿಸಬಾರದು. ಆದರೆ ಐಹಿಕ ಜೀವನದ ವಿಷಯದಲ್ಲಿ ಅವರೊಡನೆ ಉತ್ತಮ ರೀತಿ-ಯಲ್ಲಿ ವರ್ತಿಸಬೇಕೆಂದು ಅಲ್ಲಾಹನು ಆಜ್ಞಾಪಿಸುತ್ತಾನೆ.

“ನನ್ನೊಂದಿಗೆ ನಿಮಗೆ ಅರಿವಿಲ್ಲದ ಯಾರನ್ನಾದರೂ ಸಹಭಾಗಿಯಾಗಿ ಮಾಡುವಂತೆ ಅವರು ಒತ್ತಾಯಪಡಿಸಿದರೆ ಅವರ ಮಾತನ್ನು ಸ್ವೀಕರಿಸಲೇ ಬೇಡಿರಿ. ಆದರೆ ಲೌಕಿಕ ವಿಷಯಗಳಲ್ಲಿ ಅವರೊಂದಿಗೆ ಸದ್ವರ್ತನೆ ಕೈಗೊಳ್ಳಿರಿ.” (31:15)

ಇನ್ನು ತಂದೆ–ತಾಯಿಗಳು ಮುಸ್ಲಿಮೇತರರಾಗಿದ್ದರೂ ಅವರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಅವರನ್ನು ಗೌರವಿಸಿ ಅವರ ಸೇವೆಯನ್ನು ನಿರಂತರ ಮಾಡಬೇಕು. ಬುಖಾರಿ ವರದಿ ಮಾಡಿದ ಈ ಕೆಳಗಿನ ಹದೀಸ್‌ನಿಂದ ನಮಗೆ ಅದು ಸ್ಪಷ್ಟವಾಗುತ್ತದೆ.

ಅಸ್ಮಾ(ರ) ಹೇಳುತ್ತಾರೆ. ಪ್ರವಾದಿ(ಸ) ಯವರ ಕಾಲದಲ್ಲಿ ಒಮ್ಮೆ ನನ್ನ ತಾಯಿ ನನ್ನ ಬಳಿಗೆ ಬಂದರು. ಆಗ ಅವರು ಬಹುದೇವವಿಶ್ವಾಸಿಯಾಗಿದ್ದರು. ನಾನು ಪ್ರವಾದಿ(ಸ) ಯವರಲ್ಲಿ ಈ ರೀತಿ ನಿವೇದಿಸಿದೆ: “ನನ್ನ ಬಳಿಗೆ ನನ್ನ ತಾಯಿ ಬಂದಿದ್ದಾರೆ. ಅವರು ಈಗಲೂ ಇಸ್ಲಾಮನ್ನು

ದ್ವೇಷಿಸುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ನಾನು ಅವರೊಂದಿಗೆ ಸದ್ವರ್ತನೆಯಿಂದ ವರ್ತಿಸಬೇಕೇ?" ಪ್ರವಾದಿ(ಸ) ಯವರು ಉತ್ತರಿಸಿದರು. " ಹೌದು, ನೀವು ಅವರೊಂದಿಗೆ ಅನುಕಂಪದಿಂದ ವರ್ತಿಸಬೇಕು." (ಬುಖಾರಿ)

ಜಿಹಾದ್ ನಂತಹ ಉತ್ಕೃಷ್ಟ ಆರಾಧನೆಗಿಂತಲೂ ಮಾತಾಪಿತರ ಸೇವೆ ಉತ್ತಮ

ಇಸ್ಲಾಂ ಮಾತಾಪಿತರ ಸೇವೆಗೆ ಅಲ್ಲಾಹನ ಮಾರ್ಗದ ಜಿಹಾದ್ ಗಿಂತಲೂ ಹೆಚ್ಚಿನ ಮಹತ್ವವನ್ನು ನೀಡುತ್ತದೆ. ಈ ಕೆಳಗಿನ ಹದೀಸ್‌ಗಳು ಅದನ್ನು ಪುಷ್ಟೀಕರಿಸುತ್ತದೆ.

"ಅಲ್ಲಾಹನಿಗೆ ಅತ್ಯಧಿಕ ಪ್ರಿಯವಾದ ಕರ್ಮ ಯಾವುದು? ಎಂದು ಒಬ್ಬರು ಕೇಳಿದಾಗ ಪ್ರವಾದಿ(ಸ) ಯವರು ಉತ್ತರಿಸುತ್ತಾರೆ. "ಸಮಯಕ್ಕೆ ಸರಿಯಾಗಿ ನಮಾಜ್ ನಿರ್ವಹಿಸುವುದು." ಆನಂತರ ಯಾವುದೆಂದು ಪ್ರಶ್ನಿಸಿದಾಗ, "ತಂದೆತಾಯಿಗಳ ಸೇವೆ ಮಾಡುವುದು" ಎಂದು ಉತ್ತ-

ರಿಸಿದರು. ಅನಂತರ ಯಾವುದೆಂದು ಪ್ರಶ್ನಿಸಿದಾಗ, "ಲ್ಲಾಹನ ಮಾರ್ಗದಲ್ಲಿ ಹೋರಾಡುವುದು" ಎಂದು ಉತ್ತರಿಸಿದರು." (ಬುಖಾರಿ ಮುಸ್ಲಿಂ)

ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್(ರ) ರಿಂದ ವರದಿಯಾದ ಹದೀಸ್. "ಒಮ್ಮೆ ಒಬ್ಬ ವ್ಯಕ್ತಿ ಪ್ರವಾದಿ(ಸ) ಯವರ ಬಳಿಗೆ ಬಂದು ನಾನು ತಮ್ಮ ಹಸ್ತದಲ್ಲಿ ಅಲ್ಲಾಹನ ಪ್ರತಿಫಲಾಪೇಕ್ಷೆಯಿಂದ ಹಿಜ್ರ (ಅಲ್ಲಾಹನ ಮಾರ್ಗದಲ್ಲಿ ವಲಸೆ) ಹೋಗುತ್ತೇನೆ ಮತ್ತು ಅಲ್ಲಾಹನ ಮಾರ್ಗದಲ್ಲಿ ಹೋರಾಟ (ಜಿಹಾದ್) ಮಾಡುತ್ತೇನೆಂದು ಪ್ರಮಾಣವಚನ ಸ್ವೀಕರಿಸುತ್ತೇನೆ ಎಂದರು. ಆಗ ಪ್ರವಾದಿ(ಸ) ಯವರು, ನಿಮ್ಮ ತಂದೆ ತಾಯಿಯರಲ್ಲಿ ಯಾರಾದರೂ ಜೀವಂತವಿದ್ದಾರೆಯೇ? ಎಂದು ಪ್ರಶ್ನಿಸಿದರು. ಆ ವ್ಯಕ್ತಿ, "ಹೌದು ಅಲ್ಲಾಹನ ಅನುಗ್ರಹದಿಂದ ಅವರಿಬ್ಬರೂ ಬದುಕಿದ್ದಾರೆ." ಎಂದು ಹೇಳಿದರು. ಪ್ರವಾದಿ(ಸ) ಯವರು, ನೀವು ನಿಜವಾಗಿಯೂ ಅಲ್ಲಾಹನ

ಪ್ರತಿಫಲವನ್ನು ಬಯಸುತ್ತೀರಾ?" ಎಂದು ಕೇಳಿದರು. ಆ ವ್ಯಕ್ತಿ ಹೌದೆಂದು ಉತ್ತರಿಸಿದಾಗ ಪ್ರವಾದಿ(ಸ) ಯವರು ಹೇಳಿದರು, "ಹಾಗಾದರೆ ನಿಮ್ಮ ತಂದೆ ತಾಯಿಗಳ ಬಳಿಗೆ ಹೋಗಿ ಅವರ ಸೇವೆ ಮಾಡಿರಿ. ಅವರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿರಿ." (ಬುಖಾರಿ ಮುಸ್ಲಿಂ)

ಅಬೂ ಸಈದ್(ರ) ರಿಂದ ವರದಿ. ಒಮ್ಮೆ ಒಬ್ಬ ವ್ಯಕ್ತಿ ಯಮನ್ ನಿಂದ ಪ್ರವಾದಿ(ಸ) ಯವರ ಬಳಿಗೆ ತಂದೆ–ತಾಯಿಗಳ ಅನುಮತಿಯಿಲ್ಲದೆ ಜಿಹಾದ್ ನಲ್ಲಿ ಪಾಲ್ಗೊ-ಳ್ಳಲು ಬಂದರು. ಪ್ರವಾದಿ(ಸ) ಯವರು ಅವರೊಂದಿಗೆ ಕೇಳಿದರು, " ನಿಮ್ಮ ತಂದೆ-ತಾಯಿ ಜೀವಂತವಿದ್ದಾ-ರೋ? ಅವರ ಅನುಮತಿ ಪಡೆದಿದ್ದೀರೋ?" ಆ ವ್ಯಕ್ತಿ, "ಇಲ್ಲ ನಾನು ಅವರ ಅನುಮತಿ ಪಡೆದಿಲ್ಲ" ಎಂದು ಉತ್ತರಿಸಿದಾಗ ಪ್ರವಾದಿ(ಸ) ಯವರು ಉತ್ತರಿಸಿದರು, "ಹಾಗಾದರೆ ಹಿಂದಿರಿಗಿ ಹೋಗಿ ಅವರ ಅನುಮತಿ ಪಡೆದು ಬನ್ನಿ. ಅವರ ಅನುಮತಿ ದೊರೆತರೆ ಜಿಹಾದ್

ನಲ್ಲಿ ಪಾಲ್ಗೊಳ್ಳಿರಿ. ಇಲ್ಲದಿದ್ದರೆ ಅವರ ಸೇವೆ ಮಾಡುತ್ತಾ ಮನೆಯಲ್ಲೇ ಇರಿ. ಅವರ ಸಂರಕ್ಷಣೆಯ ಕಾರ್ಯದಲ್ಲಿ ಜಿಹಾದ್ ಮಾಡಿರಿ." (ಅಬೂದಾವೂದ್)

ತಂದೆ-ತಾಯಿಯ ಹಕ್ಕನ್ನು ಉಲ್ಲಂಘಿಸಿದರೆ ಆಗುವ ದುಷ್ಪರಿಣಾಮಗಳು

ತಂದೆ–ತಾಯಿಗಳೊಂದಿಗೆ ಸದ್ವರ್ತನೆ ಕೈಗೊಳ್ಳಬೇಕು. ಅವರ ಸೇವೆ ಅಥವಾ ಅವರೊಂದಿಗೆ ಮಾಡುವ ಸದ್ವ-ರ್ತನೆ ಉಭಯ ಲೋಕಗಳ ಸೌಭಾಗ್ಯವಾಗಿದೆ. ಇನ್ನು ಅದನ್ನು ಉಲ್ಲಂಘಿಸಿದರೆ ಉಭಯ ಲೋಕದಲ್ಲೂ ಅಲ್ಲಾಹನ ಕೋಪಕ್ಕೆ ಪಾತ್ರರಾಗಬೇಕಾಗುತ್ತದೆ.

ಒಮ್ಮೆ ಪ್ರವಾದಿ(ಸ) ಯವರು ಹೇಳಿದರು, "ಅವನು ಕೆಟ್ಟನು! ಅವನು ನಿಂದ್ಯನಾದನು! ಅವನು ನತದೃಷ್ಟ-ನು!" ಸಹಾಬಿಗಳು ಕೇಳಿದರು, "ಓ ಪ್ರವಾದಿಯವರೇ ಯಾರು?" ಆಗ ಪ್ರವಾದಿ(ಸ) ಯವರು, "ತಂದೆತಾಯಿ

ಅಥವಾ ಅವರ ಪೈಕಿ ಒಬ್ಬರು ವೃದ್ಧರಾಗಿರುವಾಗ (ಅವರ ಸೇವೆ ಮಾಡಿ) ಸ್ವರ್ಗ ಸಂಪಾದಿಸಲು ಸಾಧ್ಯವಾ-ಗದವನು." (ಮುಸ್ಲಿಂ)

ಅಂದರೆ ತಂದೆತಾಯಿಗಳ ಸೇವೆ ಮಾಡದಿದ್ದರೆ ಸ್ವರ್ಗ ಸಿಗುವುದಿಲ್ಲ. ಅವರ ಸೇವೆಯಿಂದಲೇ ಪರಲೋಕದಲ್ಲಿ ಮುಕ್ತಿ ಪಡೆಯಬಹುದು.

ಅಬೂ ಉಮಾಮ(ರ) ರಿಂದ ವರದಿ. ಮಾತಾಪಿತರಿಂದ ಮಕ್ಕಳಿಗೆ ದೊರೆಯುವ ಅನುಗ್ರಹಗಳ ಬಗ್ಗೆ ಪ್ರವಾದಿ(ಸ) ಯವರೊಡನೆ ವಿಚಾರಿಸಿದಾಗ ಅವರು ಹೀಗೆಂದರು. "ತಂದೆ-ತಾಯಿಗಳೇ ನಿಮ್ಮ ಸ್ವರ್ಗ. ತಂದೆ-ತಾಯಿಗಳೇ ನಿಮ್ಮ ನರಕ." (ಇಬ್ನ್ ಮಾಜ)

ಅಂದರೆ ಅವರು ಬಯಸಿದಂತೆ ಅವರ ಸೇವೆ ಮಾಡಿ ಅವರೊಂದಿಗೆ ಉತ್ತಮ ರೀತಿಯಿಂದ ವರ್ತಿಸಿದರೆ ಸ್ವ-ರ್ಗಕ್ಕೆ ಅರ್ಹರಾಗಿರುವೆವು. ಇನ್ನು ಅವರ ಹಕ್ಕುಗಳನ್ನು

ಉಲ್ಲಂಘಿಸಿ ಅವರೊಂದಿಗೆ ಕಟುವಾಗಿ ವರ್ತಿಸಿದರೆ ನರಕ ಸೇರಬೇಕಾದೀತು.

ಇಬ್ನ ಅಬ್ಬಾಸ್(ರ) ರಿಂದ ವರದಿ. ಪ್ರವಾದಿ(ಸ) ಯವರು ಹೇಳುತ್ತಾರೆ. "ಯಾರು ಅಲ್ಲಾಹನ ಪ್ರೀತಿಯ ಆಕಾಂಕ್ಷೆ-ಯಿಂದ ತಂದೆತಾಯಿಗಳ ಜೊತೆ ಸೌಜನ್ಯದಿಂದ ವರ್ತಿ-ಸುತ್ತಾರೋ, ಅವರ ಬಗ್ಗೆ ಅಲ್ಲಾಹನ ಆಜ್ಞೆಗಳನ್ನು ಅನು-ಸರಿಸುತ್ತಾ ದಿನ ಕಳೆಯುತ್ತಾರೋ, ಅವರ ಸೇವೆಗಾಗಿ ಸಮಯ ವ್ಯಯಿಸುತ್ತಾರೋ, ಅವರಿಗೆ ಸ್ವರ್ಗದ ಎರಡು ಬಾಗಿಲುಗಳು ತೆರೆಯುತ್ತವೆ." ಆಗ ಸಹಾಬಿಗಳಲ್ಲಿ ಒಬ್ಬರು ಕೇಳಿದರು. "ಅಲ್ಲಾಹನ ಸಂದೇಶವಾಹಕರೇ, ತಂದೆತಾಯಿಗಳು ಅವನೊಂದಿಗೆ ಕಟುವಾಗಿ ವರ್ತಿಸಿ-ದರೆ?" ಪ್ರವಾದಿ(ಸ) ಯವರು ಹೇಳಿದರು. " ಹೌದು ತಂದೆ–ತಾಯಿ ಅವನೊಂದಿಗೆ ಕಟುವಾಗಿ ವರ್ತಿಸು-ತ್ತಿದ್ದರೂ ಸರಿಯೇ! ತಂದೆತಾಯಿಗಳು ಅವನೊಂದಿಗೆ ಅತಿರೇಕವೆಸಗುತ್ತಿದ್ದರೂ ಸರಿಯೇ! ತಂದೆತಾಯಿಗಳು

ಅವನೊಂದಿಗೆ ಕ್ರೂರವಾಗಿ ವರ್ತಿಸುತ್ತಿದ್ದರೂ ಸರಿಯೇ!"

ಇನ್ನೊಂದು ಪ್ರವಾದಿ ವಚನದಲ್ಲಿ ಹೇಗಿದೆ: " ಅಲ್ಲಾಹನ ಸಂಪ್ರೀತಿ ತಂದೆತಾಯಿಗಳ ಸಂಪ್ರೀತಿಯಲ್ಲಿದೆ. ಅಲ್ಲಾಹನ ಕೋಪ ತಂದೆತಾಯಿಗಳ ಕೋಪದಲ್ಲಿದೆ."

ಈ ಎಲ್ಲಾ ಕುರ್‌ಆನ್ ಮತ್ತು ಹದೀಸ್ ವಚನಗಳಿಂದ ನಮಗೆ ಸಿಗುವ ಪಾಠವೆಂದರೆ ತಂದೆ-ತಾಯಿಯ ಬಗೆಗಿನ ಧೋರಣೆಯನ್ನು ಅಲ್ಲಾಹು ತನ್ನೊಂದಿಗಿನ ಧೋರಣೆಯಂತೆ ಪರಿಗಣಿಸಿದ್ದಾನೆ. ಅವರಿಗೆ ತೋರುವ ಕೃತಜ್ಞತೆಯು ಅಲ್ಲಾಹನಿಗೆ ತೋರುವ ಕೃತಜ್ಞತೆಯಾಗಿದೆ. ಅವರ ಅನುಸರಣೆ ಅಲ್ಲಾಹನ ಅನುಸರಣೆಯಾಗಿದೆ. ಅವರನ್ನು ಗೌರವಿಸುವುದು ಅಲ್ಲಾಹನಿಗೆ ಗೌರವ ಸಲ್ಲಿಸಿದಂತಾಗುತ್ತದೆ.

ತಂದೆ-ತಾಯಿಗಳ ಹಕ್ಕನ್ನು ಯಾರಾದರೂ ಉಲ್ಲಂಘಿಸಿದರೆ ನಾಳೆ ಪರಲೋಕದಲ್ಲಿ ಅವನ ನಮಾಜ್,

ಉಪವಾಸ ಮತ್ತು ಹಜ್ಜ್ ಕರ್ಮದಂತಹ ಉತ್ಕೃಷ್ಟ ಆರಾಧನಾ ಕರ್ಮದಿಂದ ಮುಕ್ತಿ ಹೊಂದಲು ಸಾಧ್ಯವಿಲ್ಲ. ಅಲ್ಲಾಹನಿಗೆ ಅರ್ಪಿಸಿದ ಆರಾಧನಾ ಕರ್ಮಗಳು ಎಷ್ಟೇ ದೊಡ್ಡದಿರಲಿ ತಂದೆ-ತಾಯಿಯ ಕೋಪದಿಂದ ಸುಟ್ಟು ಭಸ್ಮವಾಗುತ್ತದೆ. ಅದರಿಂದ ಯಾವುದೇ ಪ್ರಯೋಜನ-ವೂ ನಾಳೆ ಪರಲೋಕದಲ್ಲಿ ದೊರಕುವುದಿಲ್ಲ.

الحركة النصيحة الإسلامية
ANNASEEHA ISLAMIC MOVEMENT
SURATKAL, MANGALORE - 575 014
MOB: 9731593091 / 9945171612

Jamiyathe Ahle Hadees
Mangalore